**<u>ಸಾಕ್ಷಿಯನ್ನು ದಿಃ 23.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ವಾದಿ ಪರ ಶ್ರೀ CVS ವಕೀಲರಿಂದಃ-</u>**

ನಾನು 9 ನೇ ತರಗತಿ ವರೆಗೆ ಓದಿರುತ್ತೇನೆ. ನನಗೆ ಇಂಗ್ಲೀಷ್ ಭಾಷೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ವಕೀಲರ ಮೂಲಕ ತಿಳಿದುಕೊಂಡಿದ್ದೇನೆ. ತಾನ್ವಿಗೌಡ ನನ್ನ ಮಗಳು. ಸದರಿ ತಾನ್ವಿಗೌಡ ಈ ಕೇಸಿನ ವಾದಿ ಇದ್ದು ಅವರ ತಾಯಿ ದೀಪಿಕಾರವರು, ಅವರ ಪರವಾಗಿ ಕೇಸು ನಡೆಸುತ್ತಿದ್ದಾರೆ. ಮೊದಲನೇ ಪ್ರತಿವಾದಿ ಬೋರೇಗೌಡ ನನ್ನ ತಂದೆ. ನಮ್ಮ ತಂದೆ-ತಾಯಿಗೆ ನಾವು 3 ಜನ ಹೆಣ್ಣು ಮಕ್ಕಳು ನಾನು ಒಬ್ಬನೇ ಗಂಡು ಮಗ. ಅವರಲ್ಲಿ ನನ್ನ ಅಕ್ಕ ಒಬ್ಬರು ಜೀವಂತ ಇರುವುದಿಲ್ಲ. ಮೃತ ಪಟ್ಟ ಅಕ್ಕನ ಹೆಸರು ಸವಿತ. ಸದರಿ ಸವಿತಳ ಮಗಳೇ 6 ನೇ ಪ್ರತಿವಾದಿ ಯಶಸ್ವಿನಿ ಎಂದರೆ ಸರಿ. ನನ್ನ ಮತ್ತು ನನ್ನ ತಂದೆಯ ಸಂಬಂಧ ಚೆನ್ನಾಗಿರುತ್ತದೆ. ನನ್ನ ತಂದೆಯ ವ್ಯವಹಾರದ ಬಗ್ಗೆ ಆಗು ಹೋಗುಗಳ ಬಗ್ಗೆ ನನಗೆ ತಿಳುವಳಿಕೆ ಇಲ್ಲ. ಈಗ್ಗೆ 25-30 ವರ್ಷಗಳ ಹಿಂದೆ ನನ್ನ ಯಾವುದೇ ವ್ಯವಹಾರ ಜ್ಞಾನ ಇರಲಿಲ್ಲ. ನನ್ನ ತಂದೆ ಏನೇನು ವ್ಯವಹಾರ ಮಾಡುತ್ತಿದ್ದರು ಎಂಬ ಬಗ್ಗೆ ನನಗೆ ಖುದ್ದಾಗಿ ಗೊತ್ತಿಲ್ಲ.

ದಾವಾ ಆಸ್ತಿಗಳು ಯಾವುದೆಂದು ನನಗೆ ಗೊತ್ತಿಲ್ಲ. ದಾವಾ ಅಸ್ತಿಗಳು ಒಟ್ಟು ಕುಟುಂಬದ ಮತ್ತು ಪಿತ್ರಾರ್ಜಿತ ಆಸ್ತಿಗಳೆಂದರೆ ಸರಿಯಲ್ಲ. ಅವುಗಳನ್ನು ನಮ್ಮ ತಂದೆ ಖರೀದಿ ಮಾಡಿದ್ದು ಎಂದು ಹೇಳಿದ್ದು ಆ ಬಗ್ಗೆ ದಾಖಲೆಗಳನ್ನು ನಮ್ಮ ತಂದೆಯೇ ಕೊಟ್ಟಿರುತ್ತಾರೆ. ನಮ್ಮ ತಂದೆ ಖರೀದಿ ಮಾಡಿದ ಯಾವುದೇ ಪತ್ರ ಇಲ್ಲ ಎಂದರೆ ಸರಿಯಲ್ಲ.

ಲಕ್ಕೇಗೌಡರವರ ಮಗ ರಾಮೇಗೌಡ ಎಂದರೆ ನನ್ನ ತಾತ. ನಿಡಿ-1 ಕ್ರಯ ಪತ್ರ ನನ್ನ ತಾತ ರಾಮೇಗೌಡ ಖರೀದಿ ಮಾಡಿರುವುದು ಎಂದರೆ ಸರಿ. ಸದರಿ ಕ್ರಯ ಪತ್ರದ ಪ್ರಕಾರ ನನ್ನ ತಂದೆ ಸ್ವತಃ ಖರೀದಿ ಮಾಡಿದಂತಹ ದಾಖಲೆ ಪತ್ರ ಅಲ್ಲ ಎಂದರೆ ಸರಿ. ನನ್ನ ಲಿಖಿತ ಹೇಳಿಕೆಯಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ಏನು ಬರೆದಿದೆ ಎಂದು ನನಗೆ ಗೊತ್ತು. ಅಪ್ರಾಪ್ತ ವಾದಿಯ ಪರವಾಗಿ ಅರ್ಜಿ ಸಲ್ಲಿಸದೇ ಕೇಸು ನಡೆಸುತ್ತಿದ್ದಾರೆ ಎಂಬ ವಿಚಾರವನ್ನು ವಕೀಲರಿಗೆ ಯಾರು ಹೇಳಿದ್ದಾರೆಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಸರಿ ಇಲ್ಲ ಎಂದು ಲಿಖಿತ ಹೇಳಿಕೆಯಲ್ಲಿ ಹೇಳಿದ್ದು ಸರಿಯಾದ ಚೆಕ್ಕುಬಂದಿ ಯಾವುದು ಎಂದು

ನಾವು ಲಿಖಿತ ತಕರಾರಿನಲ್ಲಿ ಹೇಳಿಲ್ಲ. ನಾನು ನನ್ನ ತಂದೆಯ ಜೊತೆ ಅನ್ಯೋನ್ಯವಾಗಿ ಇರುವುದರಿಂದ ನಾನು ಅವರಲ್ಲಿ ಭಾಗವನ್ನು ಕೇಳುವುದೇ ಇಲ್ಲ ಎಂದರೆ ಸಾಕ್ಷಿ ನನ್ನ ತಂದೆ ನನಗೆ ಏನು ಕೊಡಬೇಕಾಗಿತ್ತೋ ಅದನ್ನೆಲ್ಲಾ ಈಗಾಗಲೇ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ತಂದೆ ಏನು ಕೊಟ್ಟಿದ್ದಾರೆ ಎಂದು ತೋರಿಸಲು ಲಿಖಿತ ಯಾವುದೇ ದಾಖಲೆ ಇಲ್ಲ.

ನನ್ನ ಹೆಂಡತಿ ದೀಪಿಕಾ ಜೀವನೋಪಾಯಕ್ಕಾಗಿ ದಿನಸಿ ಅಂಗಡಿ ನಡೆಸುತ್ತಿದ್ದಾರೆ. ನನ್ನ ಮತ್ತು ನನ್ನ ಹೆಂಡತಿ ನಡುವೆ ಎಂ ಸಿ 1043/2023 ರಂತೆ ಮೈಸೂರು ನ್ಯಾಯಾಲಯದಲ್ಲಿ ಡೈವರ್ಸ್ ಕೇಸು ನಡೆದಿರುತ್ತದೆ ಎಂದರೆ ಸರಿ. ನಾನು ಹಾಕಿದಂತಹ ಅರ್ಜಿ ಪುರಸ್ಕೃತಗೊಂಡಿದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ನನ್ನ ಹೆಂಡತಿ ಅಪೀಲು ಸಲ್ಲಿಸಿ ಅಲ್ಲಿ ತಡೆಯಾಜ್ಞೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದೀಪಿಕಾರವರನ್ನು ನಾನು ಪ್ರೀತಿಸಿ ಮದುವೆಯಾಗಿದ್ದೇನೆ ಎಂದರೆ ಸರಿ. ದಾವಾ ಹಾಕುವ ಸಮಯದಲ್ಲಿ ನನ್ನ ಮತ್ತು ದೀಪಿಕಾ ನಡುವೆ ಸಂಬಂಧ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ.

2022 ಡಿಸೆಂಬರ್ ತಿಂಗಳ ನನ್ನ ಮತ್ತು ದೀಪಿಕಾ ನಡುವೆ ಮನಸ್ತಾಪ ಶುರುವಾಗಿರುತ್ತದೆ. ಹಾಗೇ ಮನಸ್ತಾಪ ಶುರುವಾದಾಗ ನಾವು ಬೆಳವಾಡಿಯಲ್ಲಿ ವಾಸ ಇದ್ದೇವು.ಜನವರಿ 2022 ರಲ್ಲಿ ನಾನು ಮತ್ತು ದೀಪಿಕಾ ಬೇರೆ ಆಗಿದ್ದೇವು ಎಂದರೆ ಸರಿ. ತದ ನಂತರ ಮಗು ಮತ್ತು ಅವರ ಜೀವನಾಂಶಕ್ಕೆ ಅರ್ಜಿ ಹಾಕಿದ್ದರು ಎಂದರೆ ಸರಿ. ಸದರಿ ಅರ್ಜಿ ಭಾಗಶಃ ಪುರಸ್ಕೃತಗೊಂಡು ಮಾಸಿಕ 6,000/- ಗಳ ಜೀವನಾಂಶವನ್ನು ಮಗಳಿಗೆ ಕೊಡುವಂತೆ ಆದೇಶವಾಗಿತ್ತು ಎಂದರೆ ಸರಿ.

ಬನ್ನಿಕುಪ್ಪೆ ಹತ್ತಿರ ನನಗೆ ಅಪಘಾತವಾಗಿತ್ತು. ಆ ಸಂಬಂಧ ವಿಮೆ ಪರಿಹಾರ ಪಿರಿಯಾಪಟ್ಟಣದ ನ್ಯಾಯಾಲಯದಲ್ಲಿ 7 ಲಕ್ಷ ರೂ ಅವಾರ್ಡ್ ಆಗಿತ್ತು. ಆ ಬಗ್ಗೆ ದಾಖಲೆಯನ್ನು ಈ ಕೇಸಿನಲ್ಲಿ ಕೊಟ್ಟಿರುವುದಿಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ಅರ್ಥವಾಗುವುದಿಲ್ಲ ಎಂದರೆ ಸಾಕ್ಷಿಯು ನಾನೇ ಹೇಳಿ ಬರೆಸಿದ್ದೇನೆ ಎಂದು ಹೇಳುತ್ತಾರೆ. ಮಗುಳಿಗೆ ಭಾಗ ಕೊಡಬೇಕಾಗುತ್ತದೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಶಾರೀಖಾಗಿ

ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ 1 ಮತ್ತು 2 ನೇ ಐಟಂಗಳನ್ನು ಮಾರಾಟ ಮಾಡಲು ವಾದಿ ಮತ್ತು 6 ನೇ ಪ್ರತಿವಾದಿಯ ಅನುಮತಿ ಪಡೆಯಲಾಗಿತ್ತು. ಆ ಬಗ್ಗೆ ಲಿಖಿತ ದಾಖಲೆ ಇರುವುದಿಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಅವರ ಅನುಮತಿ ಕೇಳಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈಗ ಸಹನಾ ಎಂಬುವವರ ಜೊತೆ ಮದುವೆಯಾಗಿದೆ ಎಂದರೆ ಸರಿಯಲ್ಲ. ಹಾಗೇ ಮದುವೆಯಾಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿ ಅಗಿದ್ದರೂ ಸಹ ವಾದಿ ಮತ್ತು 6 ನೇ ಪ್ರತಿವಾದಿಗೆ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಭಾಗ ಕೊಡುವುದಕ್ಕೆ ನಾನು ನಿರಾಕರಿಸುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು ನನ್ನ ತಂದೆ ದಾಖಲೆಗಳನ್ನು ಸೃಷ್ಠಿಸಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.